

ಚಿತ್ರಕೃಪೆ: ರಷೀದ ಪಟೇಲ. ಬಿರಾದಾರ. ಬಿಜಾಪುರ.

# ಹಜ್... ವಿಶ್ವಭ್ರಾತೃತ್ವ ಸಮ್ಮೇಳನ

ಬಿಳಿಯರು, ಕರಿಯರು, ಅರಬರು, ತುರುಕರು, ಭಾರತೀಯರು, ಅಮೆರಿಕನ್ನರು, ಆಫ್ರಿಕನ್ನರು, ಸರ್ವ ಭಾಷಿಕರು ಮುಂತಾಗಿ ಯಾವ ಬೇಧವೂ ಇಲ್ಲದೆ ಎಲ್ಲ ದೇಶಗಳ ಮುಸ್ಲಿಮರೂ ಮಕ್ಕಾದಲ್ಲಿ ಸೇರುತ್ತಾರೆ.

■ ಸಬೀಹಾ ಫಾತಿಮಾ

'ನಾನು ಹಾಜರಿದ್ದೇನೆ, ಅಲ್ಲಾಹನೇ ನಾನು ಹಾಜರಿದ್ದೇನೆ. ನಿನಗಾರೂ ಭಾಗೀದಾರರಿಲ್ಲ. ನಾನು ಹಾಜರಿದ್ದೇನೆ. ಖಂಡಿತವಾಗಿಯೂ ಸ್ತುತಿಸ್ತೋತ್ರಗಳೂ ಅನುಗ್ರಹಗಳೂ ಅಧಿಪತ್ಯವೂ ನಿನಗೇ ಮೀಸಲು. ನಿನಗಾರೂ ಭಾಗೀದಾರರಿಲ್ಲ..'

–ಚಾಂದ್ರಮಾನ ವರ್ಷದ ಕೊನೆಯ ತಿಂಗಳಾದ ಹಜ್‌ನಲ್ಲಿ ಜಗತ್ತಿನ ಏಕದೇವ ವಿಶ್ವಾಸಿಗಳ ಕೇಂದ್ರವಾದ ಸೌದಿ ಅರೇಬಿಯಾದ ಮಕ್ಕಾ ನಗರದಲ್ಲಿರುವ ಕಾಬಾ ಭವನದೆಡೆಗೆ ಲಕ್ಷಾಂತರ ಹಾಜಿಗಳು (ಹಜ್ ನಿರ್ವಹಿಸುವವರು) ಈ ಮೇಲಿನ ಘೋಷಣೆಯೊಂದಿಗೆ ಧಾವಿಸುತ್ತಾರೆ. ಈ ಭವನದ ಸುತ್ತಮುತ್ತ ವಿಶ್ವ ಸಮ್ಮೇಳನ ಏರ್ಪಡುತ್ತದೆ. ಜಗತ್ತಿನಾದ್ಯಂತ ಲಕ್ಷಾಂತರ ಜನ ಟಿ.ವಿ. ಪರದೆಗಳ ಮೂಲಕ ಇದನ್ನು ವೀಕ್ಷಿಸುತ್ತಾರೆ.

ಪುರುಷರು ಹಜ್ ಕರ್ಮ ನೆರವೇರಿಸುವಾಗ ಹೊಲಿಗೆಯಿಲ್ಲದ ಕೇವಲ ಎರಡು ತುಂಡು ಬಿಳಿ ವಸ್ತ್ರವನ್ನು ಧರಿಸಿರುತ್ತಾರೆ. ಒಂದನ್ನು ಲುಂಗಿಯಂತೆ ಉಟ್ಟು ಕೊಂಡರೆ ಇನ್ನೊಂದನ್ನು ಹೆಗಲ ಮೇಲೆ ಹಾಕಿಕೊಳ್ಳುತ್ತಾರೆ. ಸ್ತ್ರೀಯರು ಮುಖ

ವಿನ್ಯಾಸ: ದಿಲ್